ಶಿವಸಂಕಲ್ಪ

ಶಿವಸಂಕಲ್ಪ

ಬದುಕಿನಲ್ಲಿ ಮುಖ್ಯವಾದುದು ಶಿವಸಂಕಲ್ಪ, ಎಂದರೆ ಒಳ್ಳೆಯ ಮನಸ್ಸಿನಿಂದ ಕೆಲಸಗಳನ್ನು ಮಾಡುವ ತವಕ, ಜಾಣತನ. ನುಡಿಯಾಗಲಿ, ನಡೆಯಾಗಲಿ ಮೊದಲು ಮನಸ್ಸಿನಲ್ಲೇ ಮೂಡುವುದು. ಮನಸ್ಸಿನಲ್ಲಿ 'ಒಳ್ಳೆಯದಾಗಲಿ' ಎನ್ನುವ ಬಯಕೆಯಿರದಿದ್ದರೆ ನಡೆಯೂ ಕೆಡುತ್ತದೆ, ನುಡಿಯೂ ಕೆಡುತ್ತದೆ. ಮನಸ್ಸಿನಲ್ಲಿ ಭಾವನೆ ಒಳ್ಳೆಯದಾಗಿದ್ದರೆ ಅದೇ ಒಂದು ಶಕ್ತಿಯಾಗಿ ಹೊರ ಹೊಮ್ಮಿ ಹರಿಯುತ್ತದೆ; ಹಿತವನ್ನು ತರುತ್ತದೆ, ಕ್ಷೇಮವನ್ನು ಒದಗಿಸುತ್ತದೆ. ದಿಟವಾಗಿ ಸಂಕಲ್ಪವೇ ಶಕ್ತಿ. ಅದು ಒಳ್ಳೆಯದೂ ಆಗಿದ್ದರೆ, ಎಂದರೆ 'ಶಿವಸಂಕಲ್ಪ'ವಾಗಿದ್ದರೆ, ಅದು ಶಿವ-ಶಕ್ತಿ ಸಮಾಯೋಗ.

ಮನಸ್ಸು ಕೆಲಸಮಾಡುವುದು ಸಂಕಲ್ಪದಿಂದಲೇ; 'ಸಂಕಲ್ಪಃ ಕರ್ಮ ಮಾನಸಂ' ಎಂದು ವಿವರಣೆಯಿದೆ. ಮನಸ್ಸಿನಲ್ಲಿ ಹಿಂದೆ-ಮುಂದಿನದೆಲ್ಲವನ್ನೂ ಆಲೋಚನೆಮಾಡಿ, ಬಯಕೆ ಮೈದಳೆದ ಮೇಲೆ, ಅದು ಕೆಲಸದಲ್ಲಿ ಕೈಗೂಡಲು ನೆರವಾಗುವ ನಿಶ್ಚಯ, ನಿರ್ಧಾರ ಸಂಕಲ್ಪವೆನಿಸಿಕೊಳ್ಳುತ್ತದೆ. ಸಂಕಲ್ಪದ ಮುಖ್ಯ ಲಕ್ಷಣವು ಕೆಲಸಕ್ಕೆ ಪ್ರೇರಣೆಯನ್ನು ಒದಗಿಸುವುದು; ಯಾವ ಕೆಲಸಕ್ಕಾದರೂ ಹಿನ್ನೆಲೆಯಾಗಿ ಸಂಕಲ್ಪವಿರಬೇಕು. ಸಂಕಲ್ಪ ಒಳ್ಳೆಯದಾದರೆ ಕೆಲಸವೂ ಒಳ್ಳೆಯದೇ; ಸಂಕಲ್ಪ ಕೆಟ್ಟುದಾದರೆ ಕೆಲಸವೂ ಹಾಗೆಯೇ.

ಒಳ್ಳೆಯ ಸಂಕಲ್ಪಕ್ಕೆ 'ಶಿವಸಂಕಲ್ಪ'ವೆಂದು ಹೆಸರು: 'ಶಿವಂ ಭದ್ರಂ ಕಲ್ಯಾಣಂ ಮಂಗಳಂ ಶುಭಂ.' ಆತ್ಮನ ಆರೋಗ್ಯಕ್ಕೆ

ಶಿವಸಂಕಲ್ಪದ ಅಗತ್ಯವಿದೆ. ಒಳಗಿನ ಹಿತವೇ ಅಧ್ಯಾತ್ಮ. ಅದರ ಕಡೆ ಮನಸ್ಸು ಒಲಿದರೆ ಅಪಾಯವಿಲ್ಲದೆ ಬಾಳನ್ನು ಕಳೆಯಬಹುದು; ಕಸವನ್ನು ಕೊಡವಿಹಾಕಿ, ರಸವನ್ನು ಸವಿಯಬಹುದು; ನೆರೆಹೊರೆಯವರಿಗೆ ನಮ್ಮಿಂದ ಹಿತವಾಗಬಹುದು; ಕಡೆಗೆ ಪರತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಈ ಪರತತ್ತ್ವಕ್ಕೂ 'ಶಿವ' ವೆಂದೇ ಹೆಸರು; 'ಶಿವಗತಿ' ಯೆಂದರೆ ಮುಕ್ತಿ. ಅದರ ಕಡೆ ಒಲಿದ ಮನಸ್ಸು 'ಶಿವಸಂಕಲ್ಪ.'

ಮಂತ್ರಗಳು

ಶಿವಸಂಕಲ್ಪದ ಅಗತ್ಯವನ್ನು ಒತ್ತಿ ಹೇಳುವುದೇ ಧರ್ಮದ ಉದ್ದೇಶ. ಇದನ್ನು ಕುರಿತ ಕೆಲವು ಸ್ವಾರಸ್ಯವಾದ ಮಂತ್ರಗಳು ಋಗ್ವೇದ ಪರಿಶಿಷ್ಟದಲ್ಲಿ (ಅಷ್ಟಕ 8, 8, 24; ಹತ್ತನೇ ಮಂಡಲದ 166 ನೇ ಸೂಕ್ತದ ನಂತರ) ಮತ್ತು ಯಜುರ್ವೇದದಲ್ಲಿ (34) ಆರು ಮಂತ್ರಗಳಲ್ಲಿ ಅಡಕವಾಗಿವೆ. 'ಪ್ರಪಂಚಸಾರಸಂಗ್ರಹ' ದಲ್ಲಿ ರುದ್ರಮಹಾನ್ಯಾಸವನ್ನು ವಿವರಿಸುವಾಗ "ಶಿವಸಂಕಲ್ಪಂ ಹೃದಯಂ, ಪುರುಷಸೂಕ್ತಂ ಶಿರಃ, ಉತ್ತರನಾರಾಯಣಂ ಶಿಖಾ, ಅಪ್ರತಿರಥಂ ಕವಚಂ, ಪ್ರತಿಪೂರುಷಂ ನೇತ್ರಂ; ಶತರುದ್ರೀಯಂ ಅಸ್ತ್ರಂ" ಎಂದು ಪಂಚಾಂಗ ಜಪವನ್ನು ಹೇಳಿದೆ. ಅಷ್ಟಾಂಗ ಪ್ರಣಾಮದ ನಂತರ 'ಆತ್ಮಾನಂ ರುದ್ರರೂಪಂ ಧ್ಯಾಯೇತ್' (ತಾನೇ ರುದ್ರನೆಂದು ಧ್ಯಾನಿಸಿಕೊಳ್ಳಬೇಕು) ಎಂದಿರುವುದು ಗಮನಾರ್ಹವಾದುದು. ಇಲ್ಲಿ ಬರುವ ಶಿವಸಂಕಲ್ಪದ ಪಾಠದಲ್ಲಿ ಒಟ್ಟು ಮೂವತ್ತೇಳು ಮಂತ್ರಗಳಿವೆ. ಇವುಗಳಲ್ಲಿ ಹನ್ನೊಂದು ಬೇರೆ ಬೇರೆ ವೈದಿಕ ಮಂತ್ರಗಳನ್ನೇ ಬಳಸಿಕೊಂಡು ಕಡೆಯಲ್ಲಿ 'ತನ್ಮೇ

ಮನಃ ಶಿವಸಂಕಲ್ಪಮಸ್ತು' ಎಂದು ಮುಗಿಯುತ್ತವೆ ('ತ್ರ್ಯಂಬಕಂ ಯಜಾಮಹೇ...', 'ಗಂಧದ್ವಾರಾಂ...', 'ಯಃ ಪ್ರಾಣತೋ ನಿಮಿಷತೋ...', 'ಸ್ವಸ್ತಿದಾ ವಿಶಸ್ಪತಿಃ...' ಇತ್ಯಾದಿ). ಶಿವ ಸಂಕಲ್ಪದ ಉಳಿದ ಮಂತ್ರಗಳಲ್ಲಿಯೂ ವೈದಿಕಮಂತ್ರಗಳ ನುಡಿ ಗಟ್ಟನ್ನೇ ಧಾರಾಳವಾಗಿ ಬಳಸಿಕೊಂಡಿದ್ದಾರೆ; ಅಲ್ಲಲ್ಲಿ ಪುರಾಣ ಶ್ಲೋಕಗಳ ಧಾಟಿಯನ್ನೂ ಗುರುತಿಸಬಹುದು. ವೈದಿಕ ವಾಙ್ಮಯ ದಲ್ಲಿ ಅಷ್ಟೇನು ಪ್ರಾಚೀನವೆನ್ನಬಹುದಾದ ನೆಲೆಗೆ ಸೇರದಿದ್ದರೂ, ಈ ಮಂತ್ರಗುಚ್ಛದಲ್ಲಿ ಎದ್ದುಕಾಣುವ ಮನೋಧರ್ಮವೇನೋ ಶುದ್ಧವೈದಿಕವೇ.

ಇಲ್ಲಿ ಕೊಟ್ಟಿರುವ ಶಿವಸಂಕಲ್ಪದ ಪಾಠದಲ್ಲಿ ಇಪ್ಪತ್ತುನಾಲ್ಕು ಮಂತ್ರಗಳಷ್ಟೇ ಇವೆ; ಮೇಲೆ ಹೇಳಿದ ಇತರ ಮಂತ್ರಗಳನ್ನು ಅಡಕಮಾಡಿಕೊಂಡಿರುವವನ್ನು ಬಿಟ್ಟಿದೆ. ಇಲ್ಲಿನ ಕ್ರಮ ಬಹು ಮಟ್ಟಿಗೆ ಋಗ್ವೇದ ಪರಿಶಿಷ್ಟವನ್ನು ಅನುಸರಿಸಿದೆಯಾದರೂ, ಪಾಠಾಂತರಗಳಲ್ಲಿ ಹೆಚ್ಚು ಸೂಕ್ತವೆನಿಸಿದುದನ್ನು ಬಳಸಿಕೊಂಡಿದೆ.

ಸಾಮಾನ್ಯವಾಗಿ ಈ ಮಂತ್ರಗಳು ಒಂದೊಂದೂ ನಾಲ್ಕು ಪಾದಗಳಲ್ಲಿದ್ದು ಕಡೆಯ ಸಾಲಿನಲ್ಲಿ "ತನ್ಮೇ ಮನಃ ಶಿವಸಂಕಲ್ಪ ಮಸ್ತು" ಎನ್ನುವ ಧ್ರುವವಾಕ್ಯವನ್ನು ಹೊಂದಿವೆ. ಉಳಿದ ಮೂರು ಪಾದಗಳು ಇದಕ್ಕೆ ಪೂರಕವಾಗಿರುವಂತೆಯೇ ಇರು ವುದರಿಂದ 'ತತ್' ಎನ್ನುವ ಮಾತನ್ನು 'ಆ' ಎನ್ನುವ ಅರ್ಥ ದಲ್ಲಿಯೇ ಕಾಣಿಸಿದೆ; ಕೆಲವೊಮ್ಮೆ 'ಆದುದರಿಂದ' ಎನ್ನುವ ಅರ್ಥವೂ ಬಂದಿರುವುದುಂಟು. ಅನುವಾದ ಮಾಡುವಾಗ ಶಬ್ದಾರ್ಥಕ್ಕಿಂತ ಭಾವಾರ್ಥಕ್ಕೆ ಹೆಚ್ಚಿನ ಗಮನ ಕೊಟ್ಟಿದೆ.

ತಾತ್ಪರ್ಯ

ಮನುಷ್ಯನ ಎಲ್ಲ ವ್ಯವಹಾರಗಳಿಗೂ ಮನಸ್ಸೇ ಮುಖ್ಯವಾದುದು. ಅಧ್ಯಾತ್ಮದ ನೆಲೆಯೂ ಅದೇ, ಲೌಕಿಕ ವ್ಯಾಪಾರಗಳ ನೆಲೆಯೂ ಅದೇ. ಅದನ್ನು ಬಿಟ್ಟು ಯಾರೂ ಯಾವ ಕೆಲಸವನೂ ಮಾಡುವುದಾಗದು. ವೇದಗಳೂ, ದೇವತೆಗಳೂ, ಇಂದ್ರಿಯಗಳೂ, ಇಡೀ ಜಗತ್ತೂ ಅದರಲ್ಲಿಯೇ ಅಡಗಿವೆ. ಸಂತೋಷಪಡುವುದೂ ಅದರಿಂದಲೇ, ದುಃಖಪಡುವುದೂ ಅದರಿಂದಲೇ. ಮನುಷ್ಯನಲ್ಲಿರುವ ಅದ್ಭುತ ಶಕ್ತಿಯಿದು. ಅದರಿಂದಲೇ ಪರಮಾರ್ಥವನ್ನು ಅರಿಯುವುದು ಸಾಧ್ಯ, ಪರತತ್ತ್ವವನ್ನು ಅನುಸಂಧಾನ ಮಾಡುವುದು ಸಾಧ್ಯ. ಶಿವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಸಾಧ್ಯ. ಈ ಶಕ್ತಿಯನ್ನು ನಾವು ಬಳಸಿಕೊಳ್ಳಬೇಕು ಇಲ್ಲವಾದರೆ ಪುರುಷಾರ್ಥಗಳು ಸಮರ್ಪಕವಾಗಿ ಕೈಗೂಡುವುದಿಲ್ಲ. ಮನಸ್ಸೆಂಬ ಶಕ್ತಿಯನ್ನು ಬಳಸಿಕೊಳ್ಳುವ ಬಯಕೆಯೇ ಶಿವಸಂಕಲ್ಪ. ಮನಸ್ಸು ಈ ಶಿವಸಂಕಲ್ಪದಿಂದ ಕೂಡಿರಲಿ ಎನ್ನುವುದೇ ಪ್ರಾರ್ಥನೆ, ಪ್ರಣಿಧಾನ.

ಮಂತ್ರ: ಯೇನೇದಂ ಭೂತಂ ಭುವನಂ ಭವಿಷ್ಯತ್
ಪರಿಗೃಹೀತಮಮೃತೇನ ಸರ್ವಂ ।
ಯೇನ ಯಜ್ಞಸ್ತಾಯತೇ ಸಪ್ತಹೋತಾ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 1 ॥

ಅನ್ವಯ: (ಯೇನ ಅಮೃತೇನ ಇದಂ ಭೂತಂ ಭುವನಂ ಭವಿಷ್ಯತ್ ಸರ್ವಂ ಪರಿಗೃಹೀತಂ, ಯೇನ ಸಪ್ತಹೋತಾ ಯಜ್ಞಃ ತಾಯತೇ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

ಅರ್ಥ: 1. ಅಳಿವು ಎಂಬುದಿಲ್ಲದ ಯಾವ ಮನಸ್ಸಿನಿಂದ ಹಿಂದಾದುದು, ಈಗಿರುವುದು, ಮುಂದಾಗುವುದು ಎಲ್ಲವೂ ತಿಳಿಯಲ್ಪಡುತ್ತದೆಯೋ, ಮತ್ತು ಯಾವ ಆ ಮನಸ್ಸಿನಿಂದಲೇ ಏಳು ಮಂದಿ ಋತ್ವಿಜರು ಕೂಡಿಕೊಂಡು ಮಾಡುವ ಯಜ್ಞ ಹರಡಿಕೊಳ್ಳುತ್ತದೆಯೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೇನ ಕರ್ಮಾಣ್ಯಪಸೋ ಮನೀಷಿಣೋ
ಯಜ್ಞೇ ಕೃಣ್ವಂತಿ ವಿದಥೇಷು ಧೀರಾಃ ।
ಯದಪೂರ್ವಂ ಯಕ್ಷಮಂತಃ ಪ್ರಜಾನಾಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 2 ॥

(ಯೇನ ಅಪಸಃ ಮನೀಷಿಣಃ ಧೀರಾಃ ಯಜ್ಞೇ ವಿದಥೇಷು (ಚ) ಕರ್ಮಾಣಿ ಕೃಣ್ವಂತಿ, ಯತ್ ಪ್ರಜಾನಾಂ ಅಂತಃ ಅಪೂರ್ವಂ ಯಕ್ಷಂ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

2. ಪುರುಷಾರ್ಥಗಳನ್ನು ಬಯಸುವ, ಬುದ್ಧಿವಂತರಾದ, ಸಂಯಮಶೀಲರಾದ ಜನ ಯಾವುದರಿಂದ ಯಜ್ಞವೇ ಮೊದಲಾದ ಸತ್ಕರ್ಮಗಳಲ್ಲಿ ಮತ್ತು ಯುದ್ಧವೇ ಮೊದಲಾದ ಲೌಕಿಕ ಕಾರ್ಯಗಳಲ್ಲಿ ತೊಡಗುವರೋ, ಯಾವುದು ಜನರೊಳಗೆ ಅಪೂರ್ವವಾದ ವಿಚಿತ್ರಶಕ್ತಿಯೋ, ಆ ನನ್ನ ಮನಸ್ಸು ಶಿವ ಸಂಕಲ್ಪದಿಂದ ಕೂಡಿರಲಿ.

ಯಜ್ಜಾಗ್ರತೋ ದೂರಮುದೈತಿ ದೈವಂ
ತದು ಸುಪ್ತಸ್ಯ ತಥೈವೈತಿ
ದೂರಂಗಮಂ ಜ್ಯೋತಿಷಾಂ ಜ್ಯೋತಿರೇಕಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 3 ॥

(ಯತ್ ಜಾಗ್ರತಃ ದೂರಂ ಉದೈತಿ, ತದ್ ಉ ಸುಪ್ತಸ್ಯ ತಥಾ ಏವ ಏತಿ, ದೂರಂಗಮಂ, ಜ್ಯೋತಿಷಾಂ ಜ್ಯೋತಿಃ ಏಕಂ, ತತ್ ದೈವಂ ಮನಃ ಶಿವಸಂಕಲ್ಪಂ ಅಸ್ತು)

3. ಯಾವುದು ಎಚ್ಚರವಾಗಿರುವಾಗ ದೂರ ಹರಿಯುವುದೋ, ನಿದ್ರೆಯಲ್ಲಿಯೂ ಹಾಗೆಯೇ (ದೂರ) ಹೋಗುವುದೋ, ಯಾವುದು ಲೋಕದಿಂದ ದೂರ ಹೋಗಬಲ್ಲುದೋ, ಬೆಳಕುಗಳಲ್ಲಿ ಬೆಳಕೋ, ಆ ಒಂದೇ ದಿವ್ಯಶಕ್ತಿಯಾದ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯತ್ಪ್ರಜ್ಞಾನಮುತ ಚೇತೋ ಧೃತಿಶ್ಚ
ಯಜ್ಜ್ಯೋತಿರಂತರಮೃತಂ ಪ್ರಜಾಸು ।
ಯಸ್ಮಾನ್ನ ಋತೇ ಕಿಂಚನ ಕರ್ಮ ಕ್ರಿಯತೇ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 4 ॥

(ಯತ್ ಪ್ರಜ್ಞಾನಂ ಉತ ಚೇತಃ ಧೃತಿಃ ಚ, ಯತ್ ಪ್ರಜಾಸು ಅಂತಃ ಅಮೃತಂ ಜ್ಯೋತಿಃ, ಯಸ್ಮಾತ್ ಋತೇ ಕಿಂಚನ ಕರ್ಮ ನ ಕ್ರಿಯತೇ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

4. ಯಾವುದು ತಿಳಿವಳಿಕೆಯೋ ಮತ್ತು ಆಲೋಚನೆಯ ಶಕ್ತಿಯೋ, ಧೈರ್ಯವೋ, ಯಾವುದು ಜನಗಳೊಳಗೆ ಅಳಿಯದ ಬೆಳಕಾಗಿರುವುದೋ, ಯಾವುದನ್ನು ಬಿಟ್ಟು ಯಾರೂ ಯಾವ ಕೆಲಸವನ್ನೂ ಮಾಡಲಾರರೋ ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯಸ್ಮಿನ್ನೃಚಃ ಸಾಮ ಯಜೂಂಷಿ ಯಸ್ಮಿ-
ನ್ಪ್ರತಿಷ್ಠಿತಾ ರಥನಾಭಾವಿವಾರಾಃ ।
ಯಸ್ಮಿಂಶ್ಚಿತ್ತಂ ಸರ್ವಮೋತಂ ಪ್ರಜಾನಾಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 5 ॥

(ಯಸ್ಮಿನ್ ರಥನಾಭೌ ಅರಾಃ ಇವ ಋಚಃ ಸಾಮ ಯಜೂಂಷಿ ಪ್ರತಿಷ್ಠಿತಾಃ, ಯಸ್ಮಿನ್ ಪ್ರಜಾನಾಂ ಚಿತ್ತಂ ಸರ್ವಂ ಓತಂ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

5. ಬಂಡಿಯ ಚಕ್ರದ ನಡುವೆ ಪಟ್ಟಿಗಳು ಸೇರುವಂತೆ ಯಾವುದರಲ್ಲಿ ಋಗ್ವೇದ, ಸಾಮವೇದ, ಯಜುರ್ವೇದದ ಮಂತ್ರಗಳು ಸೇರುವುವೋ, ಯಾವುದರಲ್ಲಿ ಜನಗಳ ಎಲ್ಲ ಚೇತನವೂ ಹಾಸುಹೊಕ್ಕಾಗಿ ಅಡಗಿದೆಯೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಸುಷಾರಥಿರಶ್ವಾನಿವ ಯನ್ಮನುಷ್ಯಾ-
ನ್ನೇನೀಯತೇಽಭೀಶುಭಿರ್ವಾಜಿನ ಇವ ।
ಹೃತ್ಪ್ರತಿಷ್ಠಂ ಯದಜಿರಂ ಜವಿಷ್ಠಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 6 ॥

(ಸು-ಸಾರಥಿಃ ಅಶ್ವಾನ್ ಇವ ಯತ್ ಮನುಷ್ಯಾನ್ ಅಭೀಶುಭಿಃ ವಾಜಿನ ಇವ ನೇನೀಯತೇ, ಯತ್ ಹೃತ್‌ಪ್ರತಿಷ್ಠಂ ಅಜಿರಂ ಜವಿಷ್ಠಂ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

6. ಒಳ್ಳೆಯ ಸಾರಥಿಯು ಕಡಿವಾಣದಿಂದ ಕುದುರೆಗಳನ್ನು ನೆಟ್ಟಗೆ ನಡೆಸುವಂತೆ ಯಾವುದು ಮನುಷ್ಯರನ್ನು (ಎಂದರೆ ಅವರ ಇಂದ್ರಿಯಗಳನ್ನು) (ಬುದ್ಧಿಯಿಂದ) ನಡೆಸುತ್ತದೆಯೋ, ಯಾವುದು ಹೃದಯದಲ್ಲಿ ನೆಲೆಸಿದ್ದು, ಮುಪ್ಪಿಲ್ಲದೆ ವೇಗವಾಗಿ ಹೋಗಬಲ್ಲುದೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೇ ಚ ಪಂಚ ಪಂಚದಶ ಶತ-
ಸಹಸ್ರಮಯುತಂ ನ್ಯರ್ಬುದಂ ಚ ।
ಯೇ ಯಜ್ಞಚಿತ್ತೇಷ್ಟಕಾಸ್ತಂ ಶರೀರಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 7 ॥

(ಯೇ ಚ ಪಂಚ ಪಂಚದಶ ಶತಸಹಸ್ರಂ ಅಯುತಂ ನ್ಯರ್ಬುದಂ ಚ, ಯೇ ಯಜ್ಞಚಿತ್ತೇಷ್ಟಕಾಃ ತಂ ಶರೀರಂ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

7. ಯಜ್ಞಕುಂಡವನ್ನು ಕಟ್ಟುವ ಇಟ್ಟಿಗೆಗಳಾಗಿ ಯಾವುದು ಐದು, ಹದಿನೈದು, ನೂರು, ಸಾವಿರ, ಹತ್ತುಸಾವಿರ ಅರ್ಬುದ ಸಂಖ್ಯೆಗಳಲ್ಲಿ ಒದಗುವುದೋ ಮತ್ತೆ ಒಂದುಗೂಡು ವುದೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ವೇದಾಹಮೇತಂ ಪುರುಷಂ ಮಹಾನ್ತ-
ಮಾದಿತ್ಯವರ್ಣಂ ತಮಸಃ ಪರಸ್ತಾತ್ ।
ಯಸ್ಯ ಯೋನಿಂ ಪರಿಪಶ್ಯಂತಿ ಧೀರಾ-
ಸ್ತನ್ಮೇ ಮನಃ ಶಿವಸಂಕಲ್ಪಮಸ್ತು ॥ 8 ॥

(ಏತಂ ಮಹಾಂತಂ ಆದಿತ್ಯವರ್ಣಂ ಪುರುಷಂ ತಮಸಃ ಪರಸ್ತಾತ್ ಅಹಂ ವೇದ (ಇತಿ) ಧೀರಾಃ ಯಸ್ಯ ಯೋನಿಂ ಪರಿಪಶ್ಯಂತಿ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

8. ಕತ್ತಲಿನಾಚೆ ಸೂರ್ಯನಂತೆ ಹೊಳೆಯುವ ಮಹಾನ್ ಪುರುಷನನ್ನು ನಾನು ತಿಳಿದಿದ್ದೇನೆ, ಎಂದು ಯಾವುದರ ಮೂಲ ವನ್ನು ಬುದ್ಧಿವಂತರಾದವರು ಕಾಣುವರೋ ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೇನ ಕರ್ಮಾಣಿ ಪ್ರಚರಂತಿ ಧೀರಾ
ವಿಪ್ರಾ ವಾಚಾ ಮನಸಾ ಕರ್ಮಣಾ ವಾ ।
ಯತ್ಸ್ವಾಂ ದಿಶಮನುಸಂಯಂತಿ ಪ್ರಾಣಿನ-
ಸ್ತನ್ಮೇ ಮನಃ ಶಿವಸಂಕಲ್ಪಮಸ್ತು ॥ 9 ॥

(ಯೇನ ಧೀರಾಃ ವಿಪ್ರಾಃ ವಾಚಾ ಮನಸಾ ವಾ ಕರ್ಮಣಾ ಕರ್ಮಾಣಿ ಪ್ರಚರಂತಿ, ಯತ್ ಪ್ರಾಣಿನಃ ಸ್ವಾಂ ದಿಶಂ ಅನುಸಂಯಂತಿ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

9. ಸಂಯಮಶೀಲರಾದ ಬ್ರಹ್ಮಜ್ಞಾನಿಗಳು ನುಡಿ, ನಡೆಗಳಿಂದ ಕೆಲಸವನ್ನು ಮಾಡುವುದು ಯಾವುದರಿಂದಲೋ, ಪ್ರಾಣಿಗಳು ತಂತಮ್ಮ ದಿಕ್ಕುದಾರಿಗಳನ್ನು ಹಿಡಿದು ಹೋಗುವುದು ಯಾವುದರಿಂದಲೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೋ ಮೇ ಹೃದಯಂ ಯೇ ಚ ದೇವಾ
ಯೋ ಅಂತರಿಕ್ಷಂ ಬಹುಧಾ ಕಲ್ಪಯಂತಿ ।
ಯೇ ಶ್ರೋತ್ರಂ ಚ ಚಕ್ಷುಷೀ ಸಂಚರಂತಿ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 10 ॥

(ಯೇ ದೇವಾಃ ಮೇ ಹೃದಯಂ ಅಂತರಿಕ್ಷಂ ಚ ಬಹುಧಾ ಕಲ್ಪಯಂತಿ, ಯೇ ಚ ಶ್ರೋತ್ರಂ ಚಕ್ಷುಷೀ ಸಂಚರಂತಿ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

10. ಯಾವ ದೇವತೆಗಳು ಯಾವುದರಿಂದ ನನ್ನ ಹೃದಯವನ್ನೂ ಆಕಾಶವನ್ನೂ ಬಗೆಬಗೆಯಾಗಿ ಮಾಡುವರೋ, ಯಾವುದರಿಂದ ಕಿವಿಯೂ ಕಣ್ಣುಗಳು ಕೆಲಸಮಾಡುವುವೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯಸ್ಯೇದಂ ಧೀರಾಃ ಪುನಂತಿ ಕವಯೋ
ಬ್ರಹ್ಮಾಣಮೇತಂ ವ್ಯಾವೃಣುತ ಬಿಂದುಂ ।
ಸ್ಥಾವರಂ ಜಂಗಮಮಂ ಚ ದ್ಯೌರಾಕಾಶಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 11 ॥

11. ಬುದ್ಧಿವಂತರಾದ ಕವಿಗಳು ಯಾವುದರ ಬಿಂದುವನ್ನು ಬ್ರಹ್ಮವೆಂದು ಬಗೆದು ಶುದ್ಧಿಪಡಿಸಿಕೊಳ್ಳುವರೋ, ಯಾವ ಬಿಂದುವೇ ಸ್ಥಾವರ, ಜಂಗಮಾತ್ಮಕವಾದ ಭೂಮಿಯಾಗಿ, ಆಕಾಶವಾಗಿ ಹೊರಹೊಮ್ಮಿತೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೇನ ದ್ಯೌರುಗ್ರಾ ಪೃಥಿವೀ ಚಾಂತರಿಕ್ಷಂ
ಯೇನ ಪರ್ವತಾಃ ಪ್ರದಿಶೋ ದಿಶಶ್ಚ ।
ಯೇನೇದಂ ಸರ್ವಂ ಜಗದ್ವ್ಯಾಪ್ತಂ ಪ್ರಜಾನತ್
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 12 ॥

(ಯೇನ ದ್ಯೌಃ ಉಗ್ರಾ ಪೃಥಿವೀ ಚ ಅಂತರಿಕ್ಷಂ, ಪರ್ವತಾಃ ಪ್ರದಿಶಃ ದಿಶಃ ಚ, ಇದಂ ಸರ್ವಂ ಜಗತ್ ವ್ಯಾಪ್ತಂ ಪ್ರಜಾನತ್, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

12. ಯಾವುದರಿಂದ ಆಕಾಶವೂ, ನೆಲವೂ, ಅಂತರಿಕ್ಷವೂ, ಬೆಟ್ಟಗಳೂ, ದಿಕ್ಕುಗಳೂ, ಈ ಎಲ್ಲ ಜಗತ್ತೂ ಆವರಿಸಲ್ಪಟ್ಟಿದೆಯೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಅವ್ಯಕ್ತಂ ಚಾಪ್ರಮೇಯಂ ಚ ವ್ಯಕ್ತಾ-
ವ್ಯಕ್ತಪರಂ ಚ ಯತ್ ।
ಸೂಕ್ಷ್ಮಾತ್ ಸೂಕ್ಷ್ಮತರಂ ಜ್ಞೇಯಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 13 ॥

(ಯತ್ ಅವ್ಯಕ್ತಂ ಚ ಅಪ್ರಮೇಯಂ ಚ ವ್ಯಕ್ತಾವ್ಯಕ್ತಪರಂ, ಸೂಕ್ಷ್ಮಾತ್ ಸೂಕ್ಷ್ಮತರಂ ಜ್ಞೇಯಂ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

13. ಯಾವುದು ವ್ಯಕ್ತವಾಗಿರದೋ, ಅಳಿಯಲಾಗದುದೋ, ವ್ಯಕ್ತವನ್ನೂ ಅವ್ಯಕ್ತವನ್ನೂ ಮೀರಿದುದೋ, ಸೂಕ್ಷ್ಮವಾದುದಕ್ಕಿಂತ ಇನ್ನೂ ಸೂಕ್ಷ್ಮವೆಂದು ತಿಳಿಯಬೇಕೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಆದಿತ್ಯವರ್ಣಂ ತಪಸಾ ಜ್ವಲಂತಂ
ಯತ್ಪಶ್ಯಸಿ ಗುಹಾಸು ಜಾಯಮಾನಃ ।
ಶಿವರೂಪಂ ಶಿವಮುದಿತಂ ಶಿವಾಲಯಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 14 ॥

(ಯತ್ ಗುಹಾಸು ಆದಿತ್ಯವರ್ಣಂ ಜ್ವಲಂತಂ ತಪಸಾ ಜಾಯಮಾನಃ ಪಶ್ಯಸಿ ತತ್ ಶಿವರೂಪಂ ಶಿವ ಉದಿತಂ ಶಿವಾಲಯಂ, ಮೇ ಮನಃ ಶಿವಸಂಕಲ್ಪಂ ಅಸ್ತು)

14. ಯಾವುದನ್ನು ಹೃದಯಗುಹೆಯಲ್ಲಿ ತಪಸ್ಸಿನಿಂದ ಹುಟ್ಟಿ ಸೂರ್ಯನಹಾಗೆ ಹೊಳೆಯುವಂತೆ ಕಾಣುವೆಯೋ, ಆ ಶಿವ ರೂಪದ, ಮಂಗಳಕರವಾದ, ಶಿವನಿಗೆ ನೆಲೆಯಾಗಿ ಕಾಣಿಸಿಕೊಂಡ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೇನೇದಂ ಸರ್ವಂ ಜಗತೋ ಬಭೂವ
ಯದ್ದೇವಾ ಅಪಿ ಮಹತೋ ಜಾತವೇದಾಃ ।
ಯದೇವಾಗ್ರ್ಯಂ ತಪಸೋ ಜ್ಯೋತಿರೇಕಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 15 ॥

(ಯೇನ ಇದಂ ಸರ್ವಂ ಜಗತಃ ಬಭೂವ, ಯತ್ ಮಹತಃ ದೇವಾಃ ಅಪಿ ಜಾತವೇದಾಃ, ಯತ್ ಏವ ತಪಸಃ ಅಗ್ರ್ಯಂ ಏಕಂ ಜ್ಯೋತಿಃ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

15. ಯಾವುದರಿಂದ ಇದೆಲ್ಲವೂ ಜಗತ್ತಿನದಾಯಿತೋ, ಯಾವುದರ ಹಿರಿಮೆಯಿಂದ ದೇವತೆಗಳು ಎಲ್ಲವನ್ನೂ ತಿಳಿದವರಾದರೋ, ಯಾವುದು ತಪಸ್ಸಿನ ಕೊನೆಯೋ, ಒಂದೇ ಜ್ಯೋತಿಯೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಗೋಭಿರ್ಜುಷ್ಟಂ ಧನೇನ
ಹ್ಯಾಯುಷಾ ಚ ಬಲೇನ ಚ ।
ಪ್ರಜಯಾ ಪಶುಭಿಃ ಪುಷ್ಕರಾಕ್ಷಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 16 ॥

(ಗೋಭಿಃ ಜುಷ್ಟಂ, ಧನೇನ ಹಿ ಆಯುಷಾ ಚ ಬಲೇನ ಚ ಪ್ರಜಯಾ ಪಶುಭಿಃ ಪುಷ್ಕರಾಕ್ಷಂ, ತತ್ ಮೇ ಮನಃ ಶಿವ-ಸಂಕಲ್ಪಂ ಅಸ್ತು)

16. ಹಸುಗಳಿಂದಲೂ, ಹಣದಿಂದಲೂ, ಆಯುಸ್ಸಿನಿಂದಲೂ, ಬಲದಿಂದಲೂ, ಮಕ್ಕಳುಮರಿಗಳಿಂದಲೂ, ದನಕರುಗಳಿಂದಲೂ, ಭೂಮಿಕಾಣಿಯಿಂದಲೂ ಸಂತೋಷಗೊಂಡು, ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೋऽಸೌ ಸರ್ವೇಷು ವೇದೇಷು
ಪಠ್ಯತೇऽನದ ಈಶ್ವರಃ ।
ಅಕಾರ್ಯೋ ನಿರ್ವ್ರಣೋ ಹ್ಯಾತ್ಮಾ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 17 ॥

(ಯಃ ಅಸೌ ಹಿ ಆತ್ಮಾ ಅನದಃ ಈಶ್ವರಃ ಅಕಾರ್ಯಃ ನಿರ್ವ್ರಣಃ ಸರ್ವೇಷು ವೇದೇಷು ಪಠ್ಯತೇ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

17. ಯಾವ ಈ ಆತ್ಮನು ಸಾವಿಲ್ಲದ ಈಶ್ವರನೆಂದೂ ಉತ್ಪತ್ತಿಯಿಲ್ಲದವನೆಂದೂ, ಗಾಯಗೊಳ್ಳಲಾರದವನೆಂದೂ, ಎಲ್ಲ ವೇದಗಳಲ್ಲಿ ಓದುವೆವೋ ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೋ ವೇದಾದಿಷು ಗಾಯತ್ರೀ
ಸರ್ವವ್ಯಾಪೀ ಮಹೇಶ್ವರಃ ।
ತದುಕ್ತಂ ಚ ಯದಾ ಜ್ಞೇಯಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 18 ॥

(ಯಃ ವೇದಾದಿಷು ಗಾಯತ್ರೀ, ಸರ್ವವ್ಯಾಪೀ, ಚ ಯದಾ ಜ್ಞೇಯಂ ತತ್ ಮಹೇಶ್ವರಃ ಉಕ್ತಂ, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

18. ಯಾವುದು ವೇದವೇ ಮೊದಲಾದ ಶ್ರುತಿಗಳಲ್ಲಿ ಗಾಯತ್ರಿಯೋ, ಎಲ್ಲೆಡೆಗಳಲ್ಲೂ ಹರಡಿರುವುದೋ, ಅರಿವಿಗೆ ಬಂದಾಗ ಮಹೇಶ್ವರನೆಂದು ಹೇಳಲ್ಪಡುವುದೋ ಆ ನನ್ನ ಮನಸ್ಸು ಶಿವ ಸಂಕಲ್ಪದಿಂದ ಕೂಡಿರಲಿ.

ಪ್ರಯತಪ್ರಾಣ ಓಂಕಾರಂ
ಪ್ರಣವಂ ಚ ಮಹೇಶ್ವರಂ ।
ಯಃ ಸರ್ವಂ ಯಸ್ಯ ಚಿತ್ಸರ್ವಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 19 ॥

(ಯಃ ಪ್ರಯತಪ್ರಾಣಃ ಓಂಕಾರಂ ಪ್ರಣವಂ ಚ ಮಹೇಶ್ವರಂ ಸರ್ವಂ, ಯಸ್ಯ ಸರ್ವಂ ಚಿತ್, ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

19. ಉಸಿರನ್ನು ಬಿಗಿಹಿಡಿದಾಗ (ಎಂದರೆ ಪ್ರಾಣಾಯಾಮದಲ್ಲಿ) ಯಾವುದು ಓಂಕಾರ ಸ್ವರೂಪದ, ಪ್ರಣವರೂಪದ, ಎಲ್ಲವನ್ನೂ ಅಡಗಿಸಿಕೊಂಡ ಮಹೇಶ್ವರನನ್ನು (ತಿಳಿಯುವುದೋ), ಯಾವುದರ ಚೈತನ್ಯವು ಎಲ್ಲವನ್ನೂ (ಆವರಿಸಿಕೊಂಡಿದೆಯೋ ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯೋ ವೈ ವೇದ ಮಹಾದೇವಂ
ಪ್ರಣವಂ ಪುರುಷೋತ್ತಮಂ ।
ಓಂಕಾರಂ ಪರಮಾತ್ಮಾನಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 20 ॥

(ಯಃ ವೈ ಮಹಾದೇವಂ ಪ್ರಣವಂ ಪುರುಷೋತ್ತಮಂ ಓಂಕಾರಂ ಪರಮಾತ್ಮಾನಂ ವೇದ, ತತ್ ಮೇ ಮನಃ ಶಿವ-ಸಂಕಲ್ಪಂ ಅಸ್ತು)

20. ಯಾವುದು ಮಹಾದೇವನಾದ ಪ್ರಣವರೂಪಿಯಾದ ಪುರುಷೋತ್ತಮನಾದ ಓಂಕಾರಸ್ವರೂಪನಾದ ಪರಮಾತ್ಮನನ್ನು ತಿಳಿಯುವುದೋ, ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಓಂಕಾರಂ ಚತುರ್ಭುಜಂ
ಲೋಕನಾಥಂ ನಾರಾಯಣಂ ।
ಸರ್ವಸ್ಥಿತಂ ಸರ್ವಗತಂ ಸರ್ವವ್ಯಾಪ್ತಂ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 21 ॥

21. ಓಂಕಾರರೂಪಿಯಾದ, ಚತುರ್ಭುಜನಾದ, ಲೋಕಕ್ಕೆ ಒಡೆಯನಾದ, ಎಲ್ಲೆಲ್ಲಿಯೂ ಇರುವ, ಎಲ್ಲೆಲ್ಲಿಯೂ ಸೇರಿರುವ, ಎಲ್ಲೆಲ್ಲಿಯೂ ಹರಡಿರುವ ನಾರಾಯಣನನ್ನು (ಅರಿಯುವ) ಆ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ತತ್ಪರಾತ್ಪರತೋ ಬ್ರಹ್ಮಾ
ತತ್ಪರಾತ್ಪರತೋ ಹರಿಃ ।
ತತ್ಪರಾತ್ಪರತೋಽಧೀಶಃ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 22 ॥

(ತತ್ ಪರಾತ್ ಪರತಃ ಬ್ರಹ್ಮಾ, ತತ್ ಪರಾತ್ ಪರತಃ ಹರಿಃ, ಪರಾತ್ ಪರತರಃ ಅಧೀಶಃ ತತ್ ಮೇ ಮನಃ ಶಿವಸಂಕಲ್ಪಂ ಅಸ್ತು)

22. ಅದು ಹೆಚ್ಚಿನದಕ್ಕಿಂತ ಹೆಚ್ಚಿನದಾದ ಬ್ರಹ್ಮ; ಅದೇ ಹೆಚ್ಚಿನದಕ್ಕಿಂತ ಹೆಚ್ಚಿನದಾದ ವಿಷ್ಣು, ಹೆಚ್ಚಿನದಕ್ಕಿಂತ ಹೆಚ್ಚಿನದಾದ ಈಶ್ವರ—ಈ ಕಾರಣದಿಂದ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಕೈಲಾಸಶಿಖರೇ ರಮ್ಯೇ
ಶಂಕರಸ್ಯ ಗೃಹಾಲಯಂ ।
ದೇವತಾಸ್ತತ್ರ ಮೋದಂತೇ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 23 ॥

23. ಮನಸ್ಸೆಂಬುದೇ ಸೊಗಸಾದ ಕೈಲಾಸ ಶಿಖರ; ಅಲ್ಲಿ ಶಂಕರನ ಮನೆ; ದೇವತೆಗಳು ಅಲ್ಲಿ ಸುಖಪಡುತ್ತಾರೆ — ಆದುದರಿಂದ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

ಯ ಇಮಂ ಶಿವಸಂಕಲ್ಪಂ
ಸದಾ ಧ್ಯಾಯಂತಿ ಬ್ರಾಹ್ಮಣಾಃ ।
ತೇ ಪರಂ ಮೋಕ್ಷಮಾಪ್ಸ್ಯಂತಿ
ತನ್ಮೇ ಮನಃ ಶಿವಸಂಕಲ್ಪಮಸ್ತು ॥ 24 ॥

24. ಯಾವ ಬ್ರಹ್ಮನಿಷ್ಠರು ಈ ಶಿವಸಂಕಲ್ಪವನ್ನು ಯಾವಾಗಲೂ ಮನನಮಾಡುವರೋ ಅವರು ಮೋಕ್ಷವನ್ನು ಹೊಂದುವರು; ಆದುದರಿಂದ ನನ್ನ ಮನಸ್ಸು ಶಿವಸಂಕಲ್ಪದಿಂದ ಕೂಡಿರಲಿ.

W. Q. JUDGE PRESS, BANGALORE 25